# ತತ್ವಪದಕಾರ ಕುರುಬರ ಲಿಂಗಯ್ಯನವರ ಜೀವನ ಮತ್ತು ಸಾಧನೆ

**ಬೋರಯ್ಯ ಪಿ. ಕೆ.**

ಸಂಶೋಧನಾ ವಿದ್ಯಾರ್ಥಿ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Received: 10/10/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619536**

## ABSTRACT:

ಚಿತ್ರದುರ್ಗ ಜಿಲ್ಲೆ ಹಾಗೂ ತಾಲ್ಲೂಕಿನ ತುರುವನೂರು ಗ್ರಾಮದಲ್ಲಿ ವೀರಪ್ಪ ಮತ್ತು ಮಲ್ಲಮ್ಮ ಎಂಬ ಇಬ್ಬರು ದಂಪತಿಗಳಿಗೆ ಮಗನಾಗಿ ಹುಟ್ಟಿ, ಬಾಲ್ಯದಿಂದಲೂ ಕುತೂಹಲಕಾರಿಯಗಿ ಬೆಳೆದ ಕುರುಬರ ಲಿಂಗಯ್ಯನವರು ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿ "ಮಾರೀಜಾತ್ರೆ" ಎಂಬ ಕೃತಿಯನ್ನು ಬರೆಯುವುದರ ಮೂಲಕ ಸಾಮಾಜಿಕ ಕ್ರಾಂತಿಯನ್ನುಂಟು ಮಾಡಿದ್ದಾರೆ. ಆಗಿನ ಕಾಲದಲ್ಲಿ ಕೆ.ಎಲ್. ಎಸ್. ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಶ್ರೇಣಿಗಳಿಸಿ ಜಿಲ್ಲಾ ವಿದ್ಯಾಧಿಕಾರಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರ ಪ್ರಶಂಸೆಗೆ ಪಾತ್ರರಾದರು. ಸರ್ಕಾರಿ ಕೆಲಸವನ್ನು ಗಿಟ್ಟಿಸಿಕೊಂಡು ಸಾಹಿತ್ಯದ ಮೇಲೆ ಒಲವು ಇಟ್ಟುಕೊಂಡು ಅನೇಕ ಗ್ರಂಥಗಳನ್ನು ಓದಿಕೊಂಡು ತಮ್ಮದೇ ಆದ ಶೈಲಿಯಲ್ಲಿ ಕತೆ, ನಾಟಕ, ಷಟ್ಪದಿ, ರಗಳೆ, ಶತಕ, ತ್ರಿಪದಿ, ಕಂದ ಪದ್ಯಗಳು, ತತ್ವಪದಗಳು, ಜೀವನ ಚರಿತ್ರೆ, ಅನುವಾದ ಮೊದಲಾದ ಪ್ರಕಾರಗಳಲ್ಲಿ ತಮ್ಮ ಬರವಣಿಗೆಯಲ್ಲಿ ರೂಪಿಸಿದ್ದಾರೆ. ಅವರು ಇಡೀ ಭಾರತೀಯ ಪರಂಪರೆಯಲ್ಲೆ ಅತೀ ಹೆಚ್ಚು ತತ್ವಪದಗಳನ್ನು ಬರೆದಿರುವವರ ಸಾಲಿನಲ್ಲಿ ಲಿಂಗಯ್ಯನವರು ಒಬ್ಬರೇ ಎಂದರೆ ಅತಿಶಯೋಕ್ತಿಯಾಗಲಾರದು. ಇದರ ಜೊತೆಗೆ ಸಂಸಾರ, ಶಿಕ್ಷಣ, ಸಾಮಾಜಿಕ ಹೋರಾಟಗಳನ್ನು ಮೈಗೂಡಿಸಿಕೊಂಡಿದ್ದರು. ವಿಶೇಷವಾಗಿ ಇವರ ತತ್ವಪದಗಳನ್ನು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಇವರು ಕುರುಬರ ಲಿಂಗಯ್ಯನವರ ತತ್ವಪದಗಳನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಿದೆ. ಒಟ್ಟಾರೆಯಾಗಿ ಸಾಮಾಜಿಕ ಸಮಸ್ಯೆಗಳನ್ನು ಇವರು ತಮ್ಮ ತತ್ವಪದಗಳ ಮೂಲಕ ಟೀಕಿಸಿರುವುದು ವಿಶೇಷವಾಗಿದೆ.

## KEYWORDS:

ಕುರುಬ, ತತ್ವಪದ, ಕ್ರಾಂತಿ, ಸಂಸಾರ, ಪರಂಪರೆ.

ಚಿತ್ರದುರ್ಗ ಜಿಲ್ಲೆಯ ತುರುವನೂರು ಕೆಚ್ಚೆದೆಯ ನೂರಾರು ಸ್ವಾತಂತ್ರ್ಯಹೋರಾಟಗಾರರಿಗೆ, ಉತ್ತಮ ದಾರ್ಶನಿಕರಿಗೆ, ಸಮಾಜ ಸೇವಕರಿಗೆ, ಕವಿಗಳಿಗೆ ಜನ್ಮ ನೀಡಿದೆ. ಇಂತಹ ಪುಣ್ಯ ಭೂಮಿಯಲ್ಲಿ ನೆಲೆಸಿ ವ್ಯವಸಾಯ ಹಾಗೂ ಕಂಬಳಿ ನೇಕಾರಿಕೆ ವೃತ್ತಿಯಿಂದ ಜೀವಿಸುತ್ತಿದ್ದ ಶ್ರೀ ವೀರಪ್ಪ ಮತ್ತು ಮಲ್ಲಮ್ಮನವರ ಪುತ್ರನಾಗಿ ಲಿಂಗಯ್ಯನವರು ದಿನಾಂಕ: 06-11-1905ರಂದು ಜನಿಸಿದರು. ಬೆಳೆಯುವ

ಸಿರಿ ಮೊಳಕೆಯಲ್ಲಿ ಎಂಬಂತೆ ಲಿಂಗಯ್ಯ ಬಾಲ್ಯದಲ್ಲಿಯೇ ಪ್ರತಿಭಾವಂತರಾಗಿದ್ದರು. ಆಗಿನ ಕಾಲದಲ್ಲಿ ಕೆ.ಎಲ್.ಎಸ್. ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಶ್ರೇಣಿಗಳಿಸಿ ಜಿಲ್ಲಾ ವಿದ್ಯಾಧಿಕಾರಿಗಳು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರ ಪ್ರಶಂಸೆಗೆ ಪಾತ್ರರಾದರು. ಬಡತನ ಮುಂದಿನ ವಿದ್ಯಾಭ್ಯಾಸಕ್ಕೆ ಅವಕಾಶ ನೀಡಲಿಲ್ಲ. ವಿದ್ಯಾಧಿಕಾರಿಗಳ ಒತ್ತಾಸೆಯಂತೆ ಉಪಾಧ್ಯಾಯ ವೃತ್ತಿಗೆ ಪಾದಾರ್ಪಣೆ ಮಾಡಿದರು.

ಲಿಂಗಯ್ಯನವರು ಮುಖ್ಯವಾಗಿ ಕಂದಾಚಾರ ಮೌಢ್ಯಗಳನ್ನು ತಮ್ಮ 14ನೇ ವಯಸ್ಸಿನಲ್ಲಿಯೇ ವಿರೋಧಿಸಿದ್ದರು. ತುರುವನೂರಿನಲ್ಲಿ ಮಾರಿಜಾತ್ರೆಯಲ್ಲಿ ಪ್ರಾಣಿಬಲಿಯನ್ನು ಖಂಡಿಸಿ ಜಾತ್ರೆ ನಿಲ್ಲಿಸುವಲ್ಲಿ ಯಶಸ್ವಿಯಾದರು. ನಾಲ್ಕಾರು ವರ್ಷಗಳ ಅವಧಿಯಲ್ಲಿ ಊರ ಪ್ರಮುಖರ ಮನವೊಲಿಸಿ ಸಾತ್ವಿಕ ಸಿಹಿ ಭೋಜನ ಮೂಲಕ ಮಾರಿಜಾತ್ರೆ ಆಚರಿಸುವುದನ್ನು ರೂಢಿಗೆ ತಂದರು. 'ಮಾರಿಜಾತ್ರೆ' ಎಂಬ ಕೃತಿಯನ್ನು ರಚಿಸುವ ಮೂಲಕ ಆಗಿನ ಮೈಸೂರು ರಾಜ್ಯದ ಗಮನವನ್ನು ಸೆಳೆದಿದ್ದರು. ಪ್ರಾಣಿಬಲಿಯನ್ನು ನಿಲ್ಲಿಸುವಲ್ಲಿ ಕುರುಬರ ಲಿಂಗಯ್ಯನವರದು ಆ ಕಾಲಕ್ಕೆ ಸಾಮಾಜಿಕ ಕ್ರಾಂತಿಕಾರಿ ಹೆಜ್ಜೆಯಾಗಿತ್ತು. ಬಡತನ, ಅಜ್ಞಾನ ಹೋಗಬೇಕಾದರೆ ಪ್ರತಿಯೊಬ್ಬರಿಗೂ ಶಿಕ್ಷಣ ದೊರಕಬೇಕು ಎಂಬುದೇ ಅವರ ಧ್ಯೇಯವಾಗಿತ್ತು. ಆ ಶಿಕ್ಷಣದ ಮೂಲಕ ಅವರ ಬಾಳು ಹಸನಾಗುತ್ತದೆ ಎಂಬುದು ಅವರ ದೃಢಸಂಕಲ್ಪ ಕೂಡ ಅವರದಾಗಿತ್ತು. ಅದಕ್ಕಾಗಿಯೇ ಶಿಕ್ಷಕ ಹುದ್ದೆ ಅವರನ್ನು ಹರಸಿ ಬಂದಿತ್ತು ಎಂದರೆ ಅತಿಶಯೋಕ್ತಿಯಾಗಲಾರದು.

**ಆದರ್ಶ ಶಿಕ್ಷಕರಾಗಿ ಸೇವೆ:**

1920ರಲ್ಲಿ ಶಾಲಾ ಶಿಕ್ಷಕರಾಗಿ ವೃತ್ತಿಜೀವನವನ್ನು ಆರಂಭಿಸಿದ ಲಿಂಗಯ್ಯನವರು, ಚಿತ್ರದುರ್ಗ ಜಿಲ್ಲೆಯ ನಾನಾ ಗ್ರಾಮಗಳಲ್ಲಿ ಸುಮಾರು 38 ವರ್ಷಗಳ ಕಾಲ ಸುದೀರ್ಘ ಸೇವೆ ಸಲ್ಲಿಸಿದರು. ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚಿನ ಗುರುಗಳಾದರು. ಕನ್ನಡ ಭಾಷೆ ಸಾಹಿತ್ಯ, ವ್ಯಾಕರಣ, ಗಣಿತ, ವಿಜ್ಞಾನ, ಸಮಾಜ, ಇತಿಹಾಸ, ಕಲೆ, ಸಂಸ್ಕೃತಿಗಳ ಕುರಿತು ಸುದೀರ್ಘವಾಗಿ ಮನಮುಟ್ಟುವಂತೆ ಪಾಠ ಮಾಡುತ್ತಿದ್ದರೆಂದು ಈಗ ಕೆಲವೇ ವ್ಯಕ್ತಿಗಳಲ್ಲಿ ಬದುಕುಳಿದ ಅವರ ವಿದ್ಯಾರ್ಥಿಗಳು ಈಗಲೂ ನೆನಪಿಸಿಕೊಳ್ಳುತ್ತಾರೆ. ಲಿಂಗಯ್ಯನವರು ತನ್ಮಯರಾಗಿ ಹೃದಯ ಸ್ಪರ್ಶಿಯಾಗಿ ಪಾಠ ಮಾಡುತ್ತಿದ್ದರು. ಅವರು ಗೋವಿನ ಗೀತೆಯನ್ನು ಪಾಠ ಮಾಡುತ್ತಿದ್ದಾಗ ವಿದ್ಯಾರ್ಥಿಗಳ ಕಣ್ಣುಗಳೆಲ್ಲ ಒದ್ದೆಯಾಗಿರುತ್ತಿತ್ತಂತೆ. ಹೀಗೆ ಲಿಂಗಯ್ಯನವರು ತಮ್ಮ ಪಾಠ ಪ್ರವಚನ ವೈಖರಿಯಿಂದ ವಿದ್ಯಾರ್ಥಿಗಳ ಮತ್ತು ಮೇಲಾಧಿಕಾರಿಗಳ ಮನಸ್ಸನ್ನು ಗೆದ್ದಿದ್ದರು. ಇದನ್ನು ಮೆಚ್ಚಿದ ಅಂದಿನ ಜಿಲ್ಲಾ ಶಿಕ್ಷಣಾಧಿಕಾರಿಗಳು ಲಿಂಗಯ್ಯನವರಿಗೆ ಸರಕಾರದಿಂದ ವಿಶೇಷ ಬಡ್ತಿಯನ್ನು ಸಹ ನೀಡಿ ಗೌರವಿಸಿದ್ದರು.

ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕರಾಗಿದ್ದ ಲಿಂಗಯ್ಯನವರು ಹಳ್ಳಿಗಳ ಬಡ ಮಕ್ಕಳನ್ನು ತಮ್ಮ ಮಕ್ಕಳಂತೆ ಭಾವಿಸಿ ತಮ್ಮ ಮನೆಯಲ್ಲಿಯೇ ಇಟ್ಟುಕೊಂಡು ಅಭ್ಯಾಸ ಮಾಡಿಸಿದ್ದುಂಟು. ಅದಕ್ಕೆ ಉದಾಹರಣೆ ಅವರ ಮನೆಯಲ್ಲಿಯೇ ಇದ್ದುಕೊಂಡು ಓದಿದ ಎನ್.ಟಿ. ಎರ್ರಿಸ್ವಾಮಿಯವರು ಈಗ ಜಗಲೂರಿನ ಕೆನರಾ ಬ್ಯಾಂಕಿನ ವಿಭಾಗೀಯ ಪ್ರಬಂಧಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಅವರು ಲಿಂಗಯ್ಯನವರ ಜೀವನ ಸಾಧನೆ ಕುರಿತು ಬರೆದ "ಅಡವಿ ಬೆಳದಿಂಗಳು" ಎಂಬ ಕೃತಿಯಲ್ಲಿ ಹೇಳಿದ ಮಾತುಗಳು ಹೀಗಿವೆ: "ಗುರುಗಳಾದ ಲಿಂಗಯ್ಯನವರ ಬಳಿ ನಾನು ಮೂರು ವರ್ಷಗಳ ಕಾಲ ಅವರ ಮನೆಯಲ್ಲಿದ್ದುಕೊಂಡು ಹೈಸ್ಕೂಲು ಓದಿದ್ದು ನನ್ನ ಜೀವಿತದ ಸುಕೃತವೆಂದು ಭಾವಿಸುವೆ. ಅವರ ನಡೆ-ನುಡಿ, ಆಚಾರ-ವಿಚಾರ, ಸಂಸಾರಿ-ಸನ್ಯಾಸಿ, ಗುರು-ಶಿಷ್ಯ, ಮಾನವೀಯತೆ ತುಂಬಿದ ಘಟನೆಗಳು ಇಂದಿಗೂ ನನ್ನ ಎದೆಯಲ್ಲಿ ಅಚ್ಚಳಿಯದೇ ಉಳಿದಿವೆ. ಆಗ ಅವರ ಬಳಿ ಇದ್ದಾಗ ಪೂಜ್ಯಭಾವನೆ ಹೊರತು ಬೇರೆನೂ ಅನಿಸಿರಲಿಲ್ಲ. ಈಗ ಅನಿಸುತ್ತಿದೆ ಅಮೂಲ್ಯ ನಿಧಿಯೊಂದರ ಬಳಿ ನಾನಿದ್ದೆ ಎಂದು". ಇಂಥ ಮಾತುಗಳನ್ನು ಗಮನಿಸಿದಾಗ ಗುರು-ಶಿಷ್ಯ ಸಂಬಂಧ ಎಷ್ಟೊಂದು ಮಹತ್ವದ್ದಾಗಿತ್ತು ಎಂಬುದು ತಿಳಿಯುತ್ತದೆ. ಅವರ ಕೈಯಲ್ಲಿ ಓದಿದ ವಿದ್ಯಾರ್ಥಿಗಳಲ್ಲಿ ಶಿಕ್ಷಕರ ಸಂಖ್ಯೆಯೇ ಹೆಚ್ಚು. ಕೆಲವರು ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಾರೆ.

**ಸಾಂಸಾರಿಕ ಜೀವನ:**

ಲಿಂಗಯ್ಯನವರು ಸಾಂಸಾರಿಕ ಬದುಕಿನ ಜೊತೆಯಲ್ಲಿಯೇ ಆಧ್ಯಾತ್ಮಿಕ ಸಾಧನೆಗೈದಿದ್ದಾರೆ. ಮೊದಲ ಪತ್ನಿ ಲಕ್ಷ್ಮಮ್ಮ(ವಿವಾಹ:1923) ಇಬ್ಬರು ಮಕ್ಕಳನ್ನು ಹೆತ್ತು ಅನಾರೋಗ್ಯ ಪೀಡಿತರಾಗಿ 1942ರಲ್ಲಿ ನಿಧನರಾದರು. ಲಿಂಗಯ್ಯನವರು 1943ರಲ್ಲಿ ನಾಗಮ್ಮಳನ್ನು ಮದುವೆಯಾದರು. ಸಾತ್ವಿಕ ಜೀವಿಯಾದ ನಾಗಮ್ಮನ ಹೊಟ್ಟೆಯಲ್ಲಿ ಆರು ಮಕ್ಕಳು ಜನಿಸಿದರು. ಶಿವಶರಣರು ಹೇಳುವಂತೆ "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂಬಂತಿದ್ದರು ಈ ಶರಣ ದಂಪತಿಗಳು.

ಲಿಂಗಯ್ಯನವರು ಜೀವನದಲ್ಲಿ ಉಂಡ ನೋವು ಅಪಾರ. ಬೇಸಾಯ ಹಾಗೂ ಶಿಕ್ಷಕ ವೃತ್ತಿಯಿಂದ ಬರುತ್ತಿದ್ದ ಆದಾಯವು ಜೀವನಕ್ಕೆ ಸಾಲುತ್ತಿರಲಿಲ್ಲ. ಎಷ್ಟೇ ಕಷ್ಟ-ನಷ್ಟಗಳು ಎದುರಾದರೂ ಅವುಗಳನ್ನು ಸಂಯಮದಿಂದ ನಿಭಾಯಿಸುತ್ತಿದ್ದರು. ಕಿತ್ತು ತಿನ್ನುವ ಬಡತನ ಅವರ ಆಧ್ಯಾತ್ಮಿಕ ಉನ್ನತಿಗೆ ಪೂರಕವಾಯಿತು. ಪುಟವಿಟ್ಟ ಬಂಗಾರದಂತಾದರು. ಸರಳ ಸಜ್ಜನಿಕೆಯನ್ನು ಮೈಗೂಡಿಸಿಕೊಂಡಿದ್ದ ಕುರುಬರ ಲಿಂಗಯ್ಯನವರು ಸಂಸಾರದ ಲೌಕಿಕ ಎಡರು-ತೊಡರುಗಳನ್ನು ತಾಳ್ಮೆಯಿಂದ

ಎದುರಿಸುತ್ತ, ಸುಜ್ಞಾನವೆಂಬ ನಾವೆಯ ಮೂಲಕ ಸಂಸಾರವೆಂಬ ಭವಸಾಗರವನ್ನು ದಾಟಿದ ನಿಷ್ಕಾಮಕರ್ಮ ಯೋಗಿಯಾಗಿದ್ದಾರೆ.

**ಸಾಹಿತ್ಯ ಕೃಷಿ:**

ಚಿತ್ರದುರ್ಗ ಜಿಲ್ಲೆಯ ಕೆಲವು ಹಳ್ಳಿಗಳ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಪಾಠ ಹೇಳುತ್ತ, ಜನರಿಗೆ ವೇದಾಂತ ಪ್ರವಚನ ಮಾಡುತ್ತಿದ್ದ ಲಿಂಗಯ್ಯನವರು ರಾಮಾಯಣ, ಮಹಾಭಾರತ, ಉಪನಿಷತ್ತುಗಳು, ಪುರಾಣ ಪುಣ್ಯಕಥೆಗಳನ್ನು ಓದಿ ಕರಗತ ಮಾಡಿಕೊಂಡಿದ್ದರು. ಇವರು ಶ್ರೀ ಶಾಂಕರ ಅದ್ವೈತ ಪರಂಪರೆಯ ಶ್ರೀ ನರಹರಿ ಸದ್ಗುರುಗಳ ಪರಮ ಶಿಷ್ಯರಾಗಿದ್ದರು. ಸನಾತನ ಅದ್ವೈತ ಸಿದ್ಧಾಂತದಲ್ಲಿ ಆಳವಾಗಿ ಕೃಷಿಮಾಡಿ ಆತ್ಮ ಜ್ಞಾನಾನುಭವದ ಸಾಧನೆ ಮಾಡಿದರು. ಹೀಗಾಗಿ ಅಪರೂಪದ ಕಾವ್ಯಸಿರಿಯು ಲಿಂಗಯ್ಯನವರಿಂದ ಒಡ ಮೂಡಿಬಂದಿದೆ. "ಆಡು ಮುಟ್ಟದ ಸೊಪ್ಪಿಲ್ಲ" ಎಂಬಂತೆ ಅವರು ಕೈ ಆಡಿಸದ ಸಾಹಿತ್ಯ ಕ್ಷೇತ್ರವಿಲ್ಲ. ಶ್ರೀಯುತರು ಸಾವಿರಾರು ತತ್ವಪದಗಳು, ಷಟ್ಪದಿ ಕಾವ್ಯ, ತ್ರಿಪದಿ, ಲಾವಣಿ, ಕಂದಪದ್ಯ, ನಾಟಕ, ಹರಿಕಥೆ, ವೇದಾಂತ ಕಥೆಗಳು ಹಾಗೂ ಕವನಗಳನ್ನು ಒಳಗೊಂಡ 30ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವರು. ಇವರು ಸರಳ ಕನ್ನಡದಲ್ಲಿ ಪ್ರತಿಯೊಬ್ಬ ಓದುಗನಿಗೂ ಅರ್ಥವಾಗುವ ರೀತಿ ಕಾವ್ಯವನ್ನು ರಚಿಸಿರುವುದು ವಿಶೇಷವೆನಿಸುತ್ತದೆ. ಇವರ ಸಾಹಿತ್ಯ ಒಂದಿಷ್ಟು ಜನ ಸಾಮಾನ್ಯರಲ್ಲಿ ಬದಲಾವಣೆಗಳನ್ನು ತರುವಲ್ಲಿ ಯಾವುದೇ ಅನುಮಾನವಿಲ್ಲ. ಇದಕ್ಕೆ ಅವರ ಬರಹಗಳೇ ಸಾಕ್ಷಿಯಾಗಿವೆ.

**ತತ್ವಪದಗಳ ರಚನೆ:**

ಮಧ್ಯಕಾಲೀನ ಕನ್ನಡ ಸಾಹಿತ್ಯವನ್ನು ಗಮನಿಸಿದರೆ ಅದೊಂದು ಸಂಕೀರ್ಣವಾದ ಕಾಲಘಟ್ಟವೆನ್ನಬಹುದು. ಏಕೆಂದರೆ ದಾಸಪರಂಪರೆ ನಿಂತಾಗ ಆ ಕಾಲವನ್ನು ಕತ್ತಲೆಯುಗ ಎಂದು ಕರೆಯುತ್ತಾರೆ. ಆದರೆ ಆ ಸಂದರ್ಭದಲ್ಲಿ ಅನೇಕ ಕಡೆ ತತ್ವಪದಗಳನ್ನು ಹಾಡುತ್ತಾ ಊರು, ಊರು ಅಲೆಯುತ್ತ ಜನರಲ್ಲಿ ಸಾಮರಸ್ಯದ ಬೆಳಕನ್ನು ಚೆಲ್ಲುತ್ತಾ ತತ್ವಪದಕಾರರು ಹಾಡುವುದು ಬಹುಃಶ ಗುರುತಿಸದೇ ಇರುವುದು ವಿಪರ್ಯಾಸ. ಅದರ ಮುಂದುವರೆದ ಭಾಗವಾಗಿ ಅನೇಕ ತತ್ವಪದಕಾರರು ಹುಟ್ಟಿಕೊಂಡರು. ಅಂಥವರಲ್ಲಿ ಕುರುಬರ ಲಿಂಗಯ್ಯನವರು ಸಹ ಒಬ್ಬರಾಗಿದ್ದಾರೆ. ಆದರೆ ಇಂತಹ ಅನೇಕ ತತ್ವಪದಕಾರರನ್ನು ಗುರುತಿಸಿ ಇತ್ತೀಚೆಗೆ ಜನರ ಸಂಪರ್ಕಕ್ಕೆ ತಂದು, ಸುಮಾರು ನಾಲ್ಕುನೂರು ತತ್ವಪದಕಾರರ ರಚನೆಗಳನ್ನು ಪ್ರಕಟಿಸುವ ಕೆಲಸವನ್ನು ಮಾಡಲು ಕರ್ನಾಟಕ ಸರ್ಕಾರ ಮುಂದಾಗಿದೆ. ಇದೊಂದು ಸಂತಸದ ಸಂದರ್ಭವಾಗಿದೆ. ಇರಲಿ. ಸಾಹಿತ್ಯ ಚರಿತ್ರೆಯಲ್ಲಿ ದಾಖಲಗದೇ ಉಳಿದಿದ್ದ ಅದೆಷ್ಟೋ

ಕವಿಗಳ ತತ್ವಪದಗಳು ಈಗ ಬೆಳಕು ಕಾಣುತ್ತಿರುವುದು ಸಂತಸದ ಸಂಗತಿ. ಅಂಥವರಲ್ಲಿ ಲಿಂಗಯ್ಯನವರು ಪ್ರಮುಖರು ಎನ್ನಬಹುದು. ಏಕೆಂದರೆ ಎಲ್ಲಾ ತತ್ವಪದಕಾರರಿಗಿಂತ ಇಡೀ ಭಾರತೀಯ ಪರಂಪರೆಯಲ್ಲಿ ಅತೀ ಹೆಚ್ಚು ತತ್ವಪದಗಳನ್ನು ರಚಿಸಿದವರಲ್ಲಿ ಲಿಂಗಯ್ಯನವರು ಒಬ್ಬರೆ. ಇವರು ಸಾವಿರಾರು ತತ್ವಪದಗಳಲ್ಲಿ 'ನರಹರಿ' ಎಂಬ ಅಂಕಿತನಾಮದ ಮೂಲಕ ತತ್ವಪದಗಳನ್ನು ರಚಿಸಿರುವುದನ್ನು ಕಾಣಬಹುದು. ಅವುಗಳಲ್ಲಿ ಸುಮಾರು 800 ತತ್ವಪದಗಳನ್ನು ಸಂಗ್ರಹಿಸಿ "ತುರುವನೂರು ಲಿಂಗಾರ್ಯರ ತತ್ವಪದಗಳು" ಸಂಪುಟ-8ರಲ್ಲಿ ಎರಡು ಭಾಗಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರವು ಜಂಟಿಯಾಗಿ ಪ್ರಕಟಿಸಿವೆ (ಸಂ:ನಟರಾಜ ಬೂದಾಳು,2017). ರಾಜ್ಯದಲ್ಲಿ ಪ್ರಕಟವಾಗಿರುವ ತತ್ವಪದಕಾರರ 32 ಸಂಪುಟಗಳಲ್ಲಿ ಲಿಂಗಯ್ಯನವರ ತತ್ವಪದ ಸಂಪುಟಗಳು 2 ಭಾಗಗಳಲ್ಲಿ ಪ್ರಕಟವಾಗಿರುವುದು ಅವರ ಪ್ರಬುದ್ಧ ಸಾಹಿತ್ಯಕ್ಕೆ ಸಂದ ಗೌರವವಾಗಿದೆ.

ಲಿಂಗಯ್ಯನವರ ತತ್ವಪದಗಳು ಭಕ್ತಿ, ಜ್ಞಾನ, ವೈರಾಗ್ಯ ಯೋಗಗಳ ಬಗ್ಗೆ ಹೆಚ್ಚಾಗಿ ಮಾತನಾಡುತ್ತವೆ. ಇದರ ಜೊತೆಗೆ ಸಮಾಜದ ಒಳಿತು-ಕೆಡುಕು, ಅಂಕು-ಡೊಂಕುಗಳನ್ನು ವಿಮರ್ಶೆಗೊಳಪಡಿಸುತ್ತವೆ. ಜೀವಪರವಾದ ನಿಲುವುಗಳಿಗೆ ಲಿಂಗಯ್ಯನವರು ಹೆಚ್ಚು ಒತ್ತು ನೀಡಿದ್ದಾರೆ ಎಂಬುದು ಅವರ ತತ್ವಪದಗಳನ್ನು ಅಧ್ಯಯನ ಮಾಡಿದರೆ ತಿಳಿಯುತ್ತದೆ.

ಲಿಂಗಯ್ಯನವರ ಭಕ್ತಿಗೀತೆ/ತತ್ವಪದಗಳು ವ್ಯಾಕರಣ, ಛಂದೋಬದ್ಧವಾಗಿದ್ದು, ರಾಗ, ತಾಳ, ಲಯಗಳಿಂದ ಕೂಡಿದ್ದು ಸುಶ್ರಾವ್ಯವಾಗಿ ಹಾಡಬಹುದಾಗಿದೆ. ಕಂಚಿನ ಕಂಠಸಿರಿಯ ಹಿಂದೂಸ್ತಾನಿ ಸಂಗೀತದ ಸುಪ್ರಸಿದ್ಧ ಗಾಯಕರಾದ ಪಂಡಿತ ಕುಮರದಾಸರು ಗದುಗಿನ ಪರಮಪೂಜ್ಯ ಪದ್ಮಭೂಷಣ ಡಾ.ಪಂಡಿತ ಪುಟ್ಟರಾಜ ಗವಾಯಿಗಳ ಪರಮಶಿಷ್ಯರು. ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ 'ಏ' ಶ್ರೇಣಿ ಕಲಾವಿದರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರು ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನೊಳಗೊಂಡಂತೆ ದೇಶದಾದ್ಯಂತ ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಇವರು ಲಿಂಗಯ್ಯನವರು ರಚಿಸಿದ 'ಕಡಲದಾಂಟಿದ ವೀರ ಹನುಮಾ' ಎಂಬ ಧ್ವನಿ ಸುರುಳಿಯಲ್ಲಿ ರಾಗ ಸಂಯೋಜಿಸಿ ಗಾಯನ ಮಾಡಿ ಜನಮನ ಸೂರೆಗೊಂಡಿದ್ದಾರೆ. ಅಲ್ಲದೆ ಲಿಂಗಯ್ಯನವರ ತತ್ವಪದ ಸಂಕಲನ ಭಜನಾಮೃತದಲ್ಲಿರುವ ನೂರಾರು ತತ್ವಪದಗಳನ್ನು ರಾಗ ಸಂಯೋಜನೆ ಮಾಡಿ, ಅನೇಕ ದೊಡ್ಡ ವೇದಿಕೆಗಳಲ್ಲಿ ಹಾಡಿ ಜನಮನ್ನಣೆಗಳಿಸಿದ್ದಾರೆ.

**ಪಾರಮಾರ್ಥಿಕ ಗುರು:**

ಲೌಕಿಕ ಗುರುವಿನ ವೃತ್ತಿಯ ಜೊತೆಗೆ ಪಾರಮಾರ್ಥಿಕ ಗುರುವೂ ಆಗಿ

ಲಿಂಗಯ್ಯನವರು ಎಲ್ಲಡೆ ಬೆಳಗಿದವರು. ಕಾವಿ ಧರಿಸದೆ, ಸನ್ಯಾಸಿ ಆಗದೇ, ವೇಷಭೂಷಣಗಳಿಗೆ ದಾಸರಾಗದೇ, ಸಂಸಾರಿಯಗಿದ್ದುಕೊಂಡೆ ವೇದಾಂತ ಪಂಡಿತರಾಗಿ ಹೆಸರಾದವರು.

"ನಿತ್ಯವೂ ಆನಂದವಾಗಿರುವುದೇ ನಿಜವಾದ ಆಧ್ಯಾತ್ಮಿಕತೆ" ಎನ್ನುವ ಲಿಂಗಯ್ಯನವರು ತಮ್ಮ ಶಿಷ್ಯರೊಡಗೂಡಿ ಪ್ರತಿದಿನ ಸಂಜೆ ತಮ್ಮ ಮನೆಯಲ್ಲಿ ತಾವು ರಚಿಸಿದ ತತ್ವಪದಗಳ ಭಜನೆ ನಂತರ ಪುರಾಣ, ಪ್ರವಚನಗಳನ್ನು ಮಾಡುತ್ತಿದ್ದರು. ರಾಮಾಯಣ, ಮಹಾಭಾರತ, ಭಗವದ್ಗೀತೆ, ಭಾಗವತ, ದೇವಿ ಮಹಾತ್ಮೆ, ರೇವಣ ಸಾಂಗತ್ಯ, ಶನಿಮಹಾತ್ಮೆ ಮುಂತಾದ ಗ್ರಂಥಗಳಲ್ಲಿ ಅಡಗಿರುವಾ ತಾತ್ವಿಕ ವಿಚಾರಗಳನ್ನು ಅತ್ಯಂತ ಸುಲಲಿತವಾಗಿ ಜನರಿಗೆ ಬೋಧಿಸುತ್ತಿದ್ದರು. ಇವರ 'ವೇದಾಂತ ಕಥಾಸಾರ'ದಲ್ಲಿ ಇಂಥ ಹಲವಾರು ಕಥೆಗಳಿವೆ. ತುರುವನೂರಿನ ಸುತ್ತಮುತ್ತಲಿನ ಗ್ರಾಮೀಣ ಭಾಗದಲ್ಲಿ ಇವರ ಶಿಷ್ಯರ ಸಂಖ್ಯೆ ಅಪಾರವಗಿದೆ. ಈ ಗ್ರಾಮಗಳಲ್ಲಿ ವೇದಾಂತ ಪ್ರವಚನಗಳನ್ನು ನೀಡಿದ್ದಾರೆ. ಹಗೆಯೇ ಅವರ ಶಿಷ್ಯರ ಆಹ್ವಾನ ಮೇರೆಗೆ ಚಿತ್ರದುರ್ಗ, ಚಳ್ಳಕೆರೆ, ದಾವಣಗೆರೆ, ಬಳ್ಳಾರಿ, ಮೈಸೂರು, ಬೆಂಗಳೂರು, ಶಿವಮೊಗ್ಗ, ಸೊರಬ, ಸಾಗರ, ಆಂಧ್ರದ ಶ್ರೀಶೈಲ ಮುಂತಾದ ನಗರ ಪ್ರದೇಶಗಳಲ್ಲೂ ಪ್ರವಚನಗಳನ್ನು ನೀಡಿದ್ದಾರೆ.

**ಲಿಂಗಯ್ಯನವರು ರಚಿಸಿದ ಕಾವ್ಯ ಕೃತಿಗಳು:**

**ಪ್ರಕಟಿತ ಕೃತಿಗಳು:**

- ಮಾರಿಜಾತ್ರೆ(1936): ಪ್ರಾಣಿ ಬಲಿಯನ್ನು ನಿಷೇದಿಸುವ ರಾಜ್ಯದ ಗಮನ ಸೆಳೆದ ಕೃತಿ.
- ಭಜನಾಮೃತ (ಭಕ್ತಿಯೋಗ) ಭಾಗ-1(1969) ತತ್ವಪದಗಳು.
- ಪರತತ್ವಾಮೃತ (ಜ್ಞಾನಯೋಗ) ಭಾಗ-1(1979) ತತ್ವಪದಗಳು.
- ಬೋಧಾಮೃತ (ವೈರಾಗ್ಯಯೋಗ) ಭಾಗ-1(1981) ತತ್ವಪದಗಳು.
- ಗುರುಭಕ್ತಿಸಾರ(1990): ಪರಮಾತ್ಮನ ಸ್ವರೂಪ ದರ್ಶನ ಮಾಡಿಸುವ, ಶ್ರೀಗುರುವು ಸರ್ವಶ್ರೇಷ್ಠನು ಎಂಬುದನ್ನು ಈ ಕೃತಿಯು ಪ್ರತಿಪಾದಿಸುತ್ತದೆ.
- ಶ್ರೀಗುರುಲಿಂಗ ತ್ರಿವಿಧಿ(1998): ಶ್ರೀಗುರುವು ಲಿಂಗಸ್ವರೂಪನೂ, ಪರಬ್ರಹ್ಮ ಸ್ವರೂಪನೂ ಆಗಿರುವನು ಎಂಬುದು ಈ ಕೃತಿಯ ಸ್ಪಷ್ಟನೆ.
- ಶ್ರೀ ಶನೇಶ್ವರ ಮಹಾತ್ಮೆಯು(2018): ಜೀವಿಯು ತಾನು ಮಾಡಿದ ಕರ್ಮಫಲಗಳನ್ನು ಸ್ವತಃ ತಾನೆ ಉಂಡು ತೀರಿಸಬೇಕು, ಈ ಕರ್ಮಫಲದಾತನೆ ಶನೇಶ್ವರನು ಎಂಬುದನ್ನು ಕಥಾರೂಪದಲ್ಲಿ ವಿವರಿಸಲಾಗಿದೆ.
- "ತುರುವನೂರು ಲಿಂಗಾರ್ಯರ ತತ್ವಪದಗಳು" ಸಂಪುಟ-8 ಭಾಗ-1 ಮತ್ತು ಭಾಗ-2(ಸಂ: ನಟರಾಜ್ ಬೂದಾಳು,2017).

- ವೇದಾಂತ ಕಥಾಸಾರ(2020): ಇದರಲ್ಲಿ ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಪೌರಾಣಿಕ ಗ್ರಂಥಗಳಲ್ಲಿನ ಪಾತ್ರಗಳಲ್ಲಿ ಅಡಗಿರುವ ಆಧ್ಯಾತ್ಮಿಕ ಸತ್ಯವನ್ನು ಪ್ರತಿಪಾದಿಸುವ 16 ವೈಚಾರಿಕ ಪ್ರಬಂಧಗಳಿವೆ.
- ಪ್ರಣವಾರ್ಥವು: ಈ ಕಾವ್ಯವನ್ನು ಬೈಸಾನಿ ಬಸಪ್ಪನವರು ತೆಲುಗಿನಲ್ಲಿ ರಚಿಸಿದ್ದಾರೆ. ಇದನ್ನು ಕನ್ನಡಕ್ಕೆ ಲಿಂಗಯ್ಯನವರು ಅನುವಾದ ಮಾಡಿದ್ದಾರೆ.

## ಹಸ್ತಪ್ರತಿಯಲ್ಲಿ ಇರುವ ಕೃತಿಗಳು:

- ಭಜನಾಮೃತ(ಭಕ್ತಿಯೋಗ) ಭಾಗ–2: 266 ತತ್ವಪದಗಳು.
- ಪರತತ್ವಾಮೃತ(ಜ್ಞಾನಯೋಗ) ಭಾಗ–2: 252 ತತ್ವಪದಗಳು.
- ಬೋಧಾಮೃತ(ವೈರಾಗ್ಯಯೋಗ) ಭಾಗ–2 252 ತತ್ವಪದಗಳು.
- ಗೋವಿಂದ ತ್ರಿವಿಧಿ: 333 ತ್ರಿಪದಿಗಳನ್ನು ಒಳಗೊಂಡಿದ್ದು, ಜಗತ್ತಿನ ರಕ್ಷಣಾಕರ್ತನಾದ ಮಹಾವಿಷ್ಣುವಿನ ದಶಾವತಾರಗಳ ಮಹಿಮೆ ಹಾಗೂ ವರ್ಣನೆ ಇದೆ.
- ಬಸವಣ್ಣ ತ್ರಿವಿಧಿ: ಈ ಕೃತಿ 333 ತ್ರಿಪದಿಗಳನ್ನೊಳಗೊಂಡಿದೆ.
- ಜ್ಞಾನಾಮೃತಸಾರ: ಭಾಮಿನಿ ಷಟ್ಪದಿಯ 216 ಷಟ್ಪದಿ ಕಾವ್ಯವನ್ನೊಳಗೊಂಡಿದೆ.
- ವೈರಾಗ್ಯಸಂಪದ: ಈ ಕೃತಿಯೂ ಕೂಡ 216 ಷಟ್ಪದಿ ಕಾವ್ಯಗಳನ್ನೊಳಗೊಂಡಿದೆ.
- ಕನಕದಾಸ ಚರಿತ್ರೆ: 109 ಭಾಮಿನಿ ಷಟ್ಪದಿಗಳಿಂದ ರಚಿಸಲ್ಪಟ್ಟಿದೆ.
- ಜಾಬಾಲವಿಜಯಂ: ಇದು ಹಾಲುಮತ ಸಮುದಾಯದ ದೈವಗಳನ್ನು ಹಾಗೂ ಮಹನೀಯರನ್ನು ಪರಿಚಯಿಸುವ ಒಂದು ವಿಶಿಷ್ಟ ಕಾವ್ಯ.
- ಸುನೀತಿ ಶತಕ, ಸುಗುಣೀ ಶತಕ, ಸುಜ್ಞಾನ ಶತಕ, ಸುಬೋಧ ಶತಕ: ಈ ನಾಲ್ಕು ಶತಕಗಳಲ್ಲಿ ಒಂದೊಂದು ಶತಕದಲ್ಲಿ 108 ಕಂದ ಪದ್ಯಗಳಿದ್ದು, ಇವು ನೀತಿ ಶತಕಗಳನ್ನು ಹೇಳುವ ಕಾವ್ಯಗಳಾಗಿವೆ.
- ಶಿವಯೋಗಿ ರಾಚಪ್ಪನವರ ಪುಣ್ಯ ಚರಿತ್ರೆ: ಇದು ಗದ್ಯ ರೂಪದಲ್ಲಿದೆ.
- ಕೈವಲ್ಯ ಪಂಚೀಕರಣ: ಇದು ಗದ್ಯ ರೂಪದ ಬರಹ.
- ಪ್ರಹ್ಲಾದ ಚರಿತ್ರೆ ಮತ್ತು ಚಂದ್ರಹಾಸ ಚರಿತ್ರೆ: ಇವೆರಡು ಲಿಂಗಯ್ಯನವರು ಬರೆದ ಹರಿಕಥೆಗಳಾಗಿವೆ.
- ಸತ್ಯಶ್ರೀಯಾಳ ನಾಟಕ : ಲಿಂಗಯ್ಯನವರು ಬರೆದ ಏಕೈಕ ನಾಟಕವಾಗಿದೆ. ಈ ನಾಟಕವು ಈ ಹಿಂದೆ ನಾಲ್ಕಾರು ಬಾರಿ ಚಿತ್ರದುರ್ಗದ ಕೆಲವು ಹಳ್ಳಿಗಳಲ್ಲಿ ಪ್ರದರ್ಶನಗಳನ್ನು ಕಂಡಿದೆ.

## ವಿದಾಯ:

ಲಿಂಗಯ್ಯನವರು ಶಿಕ್ಷಕರಾಗಿ, ಪ್ರವಚನ ಪ್ರವೀಣರಾಗಿ, ವೇದಾಂತ ತತ್ವಜ್ಞಾನಿಯಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು, ಶ್ರೀಲಿಂಗಾರ್ಯ ಎಂಬ ಕಾವ್ಯನಾಮದಿಂದ ಗುರುತಿಸಿಕೊಂಡು, ನರಹರಿ ಎಂಬ ಅಂಕಿತ ನಾಮದಲ್ಲಿ ಸಾವಿರಾರು ತತ್ವಪದಗಳನ್ನು ಹಾಗೂ ವೈವಿಧ್ಯಮಯ ಕೃತಿಗಳನ್ನು ರಚನೆ ಮಾಡುವುದರ

ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಕವಿಯಾಗಿ, ತತ್ವಪದಕಾರರಾಗಿ ನೇಪಥ್ಯದಲ್ಲಿದ್ದಾರೆ. ಈ ನಾಡು, ಈ ಸಮಾಜ ಲಿಂಗಯ್ಯನವರನ್ನು ಮರೆತಿರುವುದು ಮಾತ್ರ ಖೇದದ ಸಂಗತಿ. ದೈಹಿಕವಾಗಿ ಲಿಂಗಯ್ಯನವರು ಈಗ ನಮ್ಮ ಜೊತೆಗಿಲ್ಲ(08–04–1978). ಆದರೆ ಅವರು ರಚಿಸಿದ ಕೃತಿಗಳು ಅವರನ್ನ ಈ ಜಗತ್ತಿನಲ್ಲಿ ಶಾಶ್ವತವಾಗಿ ಇರುವಂತೆ ಮಾಡಿದೆ. ಏಕೆಂದರೆ ವರಕವಿ ದ.ರಾ. ಬೇಂದ್ರೆ ಅವರು ಒಂದು ಮಾತನ್ನು ಹೇಳುತ್ತಾರೆ : 'ಕೃತಿಯ ರಚಿಸದೆ ಕೃತಾರ್ಥವೆ ಜೀವ' ಎಂದು. ಒಂದು ಕೃತಿ ನಮ್ಮನ್ನು ಈ ಲೋಕದಲ್ಲಿ ಶಾಶ್ವತವಾಗಿ ಇರುವಂತೆ ಮಾಡುತ್ತದೆ. ಅದೇ ರೀತಿ ಲಿಂಗಯ್ಯನವರು ರಚನೆ ಮಾಡಿದ ಜ್ಞಾನ ಭಂಡಾರದಂತಿರುವ ಸಾಹಿತ್ಯ ನಮ್ಮ ಕಣ್ಣ ಮುಂದಿದೆ. ಇವರ ಸಾಹಿತ್ಯದಲ್ಲಿ ಕೆಲವು ಕೃತಿಗಳು ಮಾತ್ರ ಪ್ರಕಟಣೆಯ ಭಾಗ್ಯ ಕಂಡಿವೆ. ಇನ್ನುಳಿದಂತೆ ಲಿಂಗಯ್ಯನವರ ಸಾಹಿತ್ಯವನ್ನು ಸಮಗ್ರವಾಗಿ ಬೆಳಕಿಗೆ ತರಬೇಕಾದ ಜವಾಬ್ದಾರಿ ಸರಕಾರ, ಸಮಾಜ, ಕುಟುಂಬ ವರ್ಗದ ಮೇಲಿದೆ. ಸರ್ವಧರ್ಮ ಸಮನ್ವಯತೆಯನ್ನು ಸಾರುವ ಇವರ ಕೃತಿಗಳು ನಿಂತ ನೀರಿನಂತೆ ಮಡುಗಟ್ಟಿ ನಿಲ್ಲಬಾರದು. ಇವರ ಕೃತಿಗಳು ಪ್ರತಿಯೊಬ್ಬ ಶ್ರೀಸಾಮಾನ್ಯನನ್ನು ತಲುಪಿ, ಜನಮನದಲ್ಲಿ ಪ್ರವಹಿಸಿದಾಗಲೇ ಲಿಂಗಯ್ಯನವರ ತತ್ವ ಚಿಂತನೆಯು ಸಾಕಾರಗೊಳ್ಳುತ್ತದೆ.

**ಆಕರ ಗ್ರಂಥಗಳು:**

1. ಎರ್ರಿಸ್ವಾಮಿ ಎನ್.ಟಿ., (2016), ಅಡವಿ ಬೆಳದಿಂಗಳು, ಗೀತಾಂಜಲಿ ಪುಸ್ತಕ ಪ್ರಕಾಶನ, ಶಿವಮೊಗ್ಗ.
2. ಹಳ್ಳಿಕೇರಿ ಎಫ್.ಟಿ., (2019), ಹಾಲುಮತ ಸಂಸ್ಕೃತಿ –2, ಯಾಜಿ ಪ್ರಕಾಶನ, ಹೊಸಪೇಟೆ.
3. ಅಮರೇಶ ನುಗಡೋಣಿ, (2014), ತತ್ವಪದ ಸಾಹಿತ್ಯ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.